ಅಸಲು ದಾವಾ ನಂ.84/2024
ಪಿ ಡಬ್ಲ್ಯು-2

ದಿನಾಂಕಃ 05-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ನಂ.2 ರಿಂದ 5 ರವರ ಪರ ಶ್ರೀ. ವಿ ಬಿ ಟಿ ವಕೀಲರಿಂದ.**

ನನ್ನ ಮದುವೆ ಯಾವ ದಿನಾಂಕದಂದು ಆಗಿರುತ್ತದೆ ಎಂದು ಗೊತ್ತಿಲ್ಲ. ಆದರೆ 1958 ರಲ್ಲಿ ಆಗಿರುತ್ತದೆ. ಯಲ್ಲವ್ವ ಇವರ ಮದುವೆ ಯಾವಾಗ ಆಗಿರುತ್ತದೆ ಎಂದು ಗೊತ್ತಿಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ಪ್ರತಿವಾದಿ ನಂ.3 ರಿಂದ 5 ಪಾರವ್ವಳ ಮಕ್ಕಳು ಎಂದರೆ ಸರಿ. ಬಸವ್ವ ಇವಳ ವಿವಾಹ ಯಾವ ದಿನಾಂಕದಂದು ಆಗಿರುತ್ತದೆ ಎಂದು ಗೊತ್ತಿಲ್ಲ. ಅವರ ಲಗ್ನದಲ್ಲಿ ನಾನು ಪಾಲ್ಗೊಂಡ ಬಗ್ಗೆ ಪೋಟೋಗಳು ಇಲ್ಲ. ಸಾಕ್ಷಿ ಲಗ್ನಕ್ಕೆ ಹೋಗಿರುವುದಾಗಿ ಸ್ವತಃ ನುಡಿಯುತ್ತಾರೆ. ಬಸವಣ್ಣೆಪ್ಪ ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಬಸವಣ್ಣೆಪ್ಪ ಇವರ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿರುವುದಾಗಿ ಸಾಕ್ಷಿ ಸ್ವತಃ ನುಡಿಯುತ್ತಾರೆ. ಹಾಗೇ ಯಾವ ದಿನಾಂಕದಂದು ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡ ಬಗ್ಗೆ ಹೇಳಲು ಬರುವುದಿಲ್ಲ. ನಾನು ಮತ್ತು ಬಸವಣ್ಣೆಪ್ಪ ಯಾವ ದಿನಾಂಕದಂದು ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಹೇಳಲು ಬರುವುದಿಲ್ಲ. ಹಾಗೇ ಪಾಲು ವಿಭಾಗ ಮಾಡಿಕೊಂಡ ಬಗ್ಗೆ ಕಾಗದ ಪತ್ರ ನನ್ನ ಬಳಿ ಇಲ್ಲ. ಹಾಗೇ ಪಾಲು ವಿಭಾಗ ಆದ ಬಗ್ಗೆ ಕಂದಾಯ ಇಲಾಖೆಯ ಡ ನಂಬರ ಇಲ್ಲ.

2. 1 ನೇ ಪ್ರತಿವಾದಿ ತನ್ನ ಹೆಸರುಗಳನ್ನು ದಾವಾ ಆಸ್ತಿಗೆ ಯಾವಾಗ ಹಚ್ಚಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಪ್ರತಿವಾದಿ ನಂ.3 ರಿಂದ 5 ಇವರ ಹೆಸರುಗಳು ದಾವಾ ಆಸ್ತಿಗೆ ಯಾವಾಗ ದಾಖಲು ಆಗಿರುತ್ತವೆ ಎಂದು ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಉತಾರಗಳಲ್ಲಿ ಪ್ರತಿವಾದಿಯರ ಹೆಸರು ಯಾವಾಗ, ಯಾವ ಆಧಾರದಿಂದ ದಾಖಲು ಆಗಿರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ. ಬಸವ್ವ ಇವಳ ಹೆಸರು ದಾವಾ ಆಸ್ತಿಗಳಿಗೆ ದಾಖಲಾದ ಬಗ್ಗೆ ನನಗೆ ಮಾಹಿತಿ ಇಲ್ಲ. ಬಸವ್ವಳ ಮಕ್ಕಳು ಈಗ 20 ವರ್ಷದಿಂದ ಹೊರಗಡೆ ವಾಸ ಹೊಂದಿರುತ್ತಾರೆ. ಬಸವಣ್ಣೆಪ್ಪ ತೀಕೊಂಡ ನಂತರ ಬಸವ್ವಳದಾಗಲೀ ಇಲ್ಲವೇ ಆಕೆಯ ಮಕ್ಕಳದಾಗಲೀ ಹೆಸರು ದಾವಾ ಆಸ್ತಿಗಳಿಗೆ ವಾರಸಾ

ನಾತೆಯಿಂದ ದಾಖಲು ಆಗಿಲ್ಲ ಎಂದರೆ ಸರಿ. ಬಸವಣ್ಣೆಪ್ಪನ ಕುಟುಂಬದಲ್ಲಿ ಏನು ವ್ಯವಹಾರ ಬದಲಾವಣೆ ಆಗಿರುತ್ತವೆ ಎಂಬ ಬಗ್ಗೆ ಸ್ವಂತಕ್ಕೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಪ್ರತಿವಾದಿ ನಂ.3 ಮತ್ತು 4 ಇವರ ಹೆಸರುಗಳು ದಾವಾ ಆಸ್ತಿಯ ಉತಾರಗಳಲ್ಲಿ ಹಚ್ಚಿ ಈಗ 20 ವರ್ಷ ಆಯಿತು. ಸಾಕ್ಷಿ ಅವರು ಕದ್ದು ಮುಚ್ಚಿ ಹಚ್ಚಿಕೊಂಡಿರುವುದಾಗಿ ನುಡಿಯುತ್ತಾರೆ. ಹಾಗೇ ಯಾವ ದಿನಾಂಕದಂದು ಕದ್ದು ಮುಚ್ಚಿ ಹಚ್ಚಿಕೊಂಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಹಾಗೇ ಹೆಸರು ಹಚ್ಚಿಕೊಂಡ ಬಗ್ಗೆ ಪ್ರತಿವಾದಿ ನಂ.1, 2 ಮತ್ತು ಉಳಿದ ಪ್ರತಿವಾದಿಯರು ಯಾವುದೇ ಅಪೀಲು ಮಾಡಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿಯ ಹೆಸರಿನಲ್ಲಿ ಯಾವ ಆಸ್ತಿಗಳು ಇರುತ್ತವೆ ಎಂದು ಹೇಳಲು ಬರುವುದಿಲ್ಲ. ಹಾಗೇ ಯಾವ ಆಸ್ತಿ ನಂಬರುಗಳಿಗೆ 4 ನೇ ಪ್ರತಿವಾದಿಯ ಹೆಸರು ಹತ್ತಿರುತ್ತದೆ ಎಂದು ಹೇಳಲು ಬರುವುದಿಲ್ಲ. ನನಗೆ ಬಂದ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಇರುತ್ತವೆ. ಆ ಹಿರಿಯರಿಗೆ ಆಸ್ತಿಗಳು ಯಾರಿಂದ ಬಂದಿರುತ್ತವೆ ಎಂದು ಹೇಳಲು ಬರುವುದಿಲ್ಲ. ನನಗೆ ಹಿರಿಯರಿಂದ 8 ಎಕರೆ ಜಮೀನು ಬಂದಿರುತ್ತದೆ. ಅದರ ಸರ್ವೇ ನಂಬರ 48 ಇರುತ್ತದೆ. ಸದರಿ ಸರ್ವೇ ನಂಬರ 48 ರ ಒಟ್ಟು ಕ್ಷೇತ್ರ ಎಷ್ಟು ಎಂದು ಹೇಳಲು ಬರುವುದಿಲ್ಲ. ಸರ್ವೇ ನಂ.113/17 ಯಾರ ಹೆಸರಿನಲ್ಲಿ ಇರುತ್ತದೆ ಎಂದು ಗೊತ್ತಿಲ್ಲ. ಸದರಿ ಜಮೀನು ನಮ್ಮ ಮನೆತನಕ್ಕೆ ಸಂಬಂಧಿಸಿದ ಜಮೀನು ಅಲ್ಲ ಎಂದರೆ ಸರಿ.

3. ವಾದಿಯರು ಯಾವಾಗ ಹುಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿ ಅವರನ್ನು ತಾನೇ ಜೋಪಾನ ಮಾಡಿರುವುದಾಗಿ ನುಡಿಯುತ್ತಾರೆ. ನಾನು ವಾದಿಯರನ್ನು ಜೋಪಾನ ಮಾಡಿರುವುದಾಗಿ ಹೇಳಿದ್ದು, ಈ ಕುರಿತು ಯಾವುದೇ ಸಮಾರಂಭದ ಫೋಟೋ ನನ್ನ ಬಳಿ ಇಲ್ಲ. ಬಸವ್ವಳ ಲಗ್ನ ಸಮಾರಂಭ, ಹಬ್ಬದ ಸಮಾರಂಭ ಹಾಗೂ ಅವಳ ಮಕ್ಕಳ ಲಗ್ನದ ಸಮಾರಂಭದಲ್ಲಿ ನಾನು ಇದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ. ಸರ್ವೇ ನಂ.41 ನೇದ್ದಕ್ಕೆ ಸಂಬಂಧಿಸಿದಂತೆ ಕಳ್ಳಿಮನಿ ಮನೆತನದಲ್ಲಿ ಸಾಕಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲು ಆಗಿರುತ್ತವೆ ಎಂದರೆ ಸರಿ. ನಾನು ಜಮೀನನ್ನು 1 ನೇ ಪ್ರತಿವಾದಿಯಿಂದ ಪಡೆದುಕೊಂಡು ಸಾಗುವಳಿ ಮಾಡುತ್ತಿರುತ್ತೇನೆ. ಹಾಗೇ ಸಾಗುವಳಿ ಮಾಡುವ ಕುರಿತು ಯಾವುದೇ ಕಾಗದ ಪತ್ರ ಮಾಡಿಕೊಂಡಿಲ್ಲ. 4 ನೇ ಪ್ರತಿವಾದಿಯ

ಹೆಸರಿನಲ್ಲಿ ಇರುವ ಜಮೀನುಗಳನ್ನು ಅವರೇ ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಯಲ್ಲವ್ವ ಇವರನ್ನು ಮಾತ್ರ ವಿವಾಹವಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾಟ್ನಿಯಾಗಿರುವುದಾಗಿ ಹೇಳಿದ್ದು ನನ್ನ ಹೆಸರಿಗೆ 08 ಎಕರೆ ಜಮೀನು ಮತ್ತು ನನ್ನ ಸಹೋದರನಿಗೆ 04 ಎಕರೆ ಜಮೀನು ಬಂದಿರುತ್ತದೆ. ಹಾಗೇ ಯಾವ ಇಸವಿಯಲ್ಲಿ ಆ 04 ಎಕರೆ ಜಮೀನು ನೀಡಲಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದನು ಹೊರತುಪಡಿಸಿ ಅದರಲ್ಲಿಯ ಸಂಗತಿ ಗೊತ್ತಿಲ್ಲ ಎಂದರೆ ಸರಿ. ನನಗೆ ಸಾಕ್ಷ್ಯ ನುಡಿಯಲು ವಾದಿಯರು ಈ ದಿವಸ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಬಸವ್ವ ಇವರು 1 ನೇ ಪ್ರತಿವಾದಿಯನ್ನು ಎಂದು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಅವರ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವ್ವ ಇವಳಾಗಲೀ, ವಾದಿಯರಾಗಲೀ ದಾವಾದ ಆಸ್ತಿಗಳಿಗೆ ಏನು ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ.

<u>ಪಾಟೀಸವಾಲು</u>ಃ ಪ್ರತಿವಾದಿ ನಂ.1, 6, 7 ರವರ ಪರ ಶ್ರೀ. ಯು ಎಸ್ ಕೆ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).